ಶ್ರೀ ಆರ್. ಗುಂಡೂರಾವ್.—ಆ ವಿವರಗಳು ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿ ಕೊಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಕಳೆದ ೮ ವರ್ಷಗಳ ಅವಧಿಯಲ್ಲಿ ೬ ಕಿ ಮೀ. ರಸ್ತೆಗೆ ಮಾತ್ರ ಟಾರು ಹಾಕಲಾಗಿದೆ. ಅಂದರೆ ನಮ್ಮ ತಾಲ್ಲೂಕಿನಲ್ಲಿ ಈ ಟಾರ್ ಹಾಕುವ ಕೆಲಸ ಸರಿಯಾಗಿ ನಡೆದಿಲ್ಲವೆಂಬುದು ಈ ಉತ್ತರದಿಂದ ತಿಳಿದು ಬರುತ್ತದೆ. ಇನ್ನು ಮುಂದೆಯಾದರೂ ಹೆಚ್ಚಿನ ರಸ್ತೆಗಳಿಗೆ ಟಾರ್ ಹಾಕಿಸಲು ಮತ್ತು ಕೆಟ್ಟಿರುವ ರಸ್ತೆಗಳನ್ನು ರಿಪೇರಿ ಮಾಡಿಸಲು ವ್ಯವಸ್ಥೆ ಮಾಡುತ್ತೀರಾ ? ಮಂತ್ತು ರಸ್ತೆಗಳು ಇಲ್ಲದಿರುವ ಕಡೆಗಳಿಗೆ ರಸ್ತೆಗಳನ್ನು ಮಾಡಿಸುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈಗ ಯಾವುದೇ ನಿರ್ದಿಷ್ಟವಾದ ಭರವಸೆ ಕೊಡುವುದಕ್ಕಾಗುವುದಿಲ್ಲ. ಯಾವ ಯಾವ ರಸ್ತೆಗಳನ್ನು ಮಾಡಿಸುವುದು ಮುಖ್ಯವಿದೆಯೋ, ಅದನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಎ.ಜಿ. ಕೊಡಗಿ.—ಇದು ಕೇವಲ ಆರಕಲಗೂಡಿಗೆ ಮಾತ್ರ ಸೀಮಿತವಾಗಿಲ್ಲ. ಈ ಐಸಿಆರ್‌ಸಿ ರಸ್ತೆಗಳ ಕೆಲಸವನ್ನು ನಮ್ಮ ರಾಜ್ಯದಲ್ಲಿ ೧೯೭೨ರಲ್ಲಿ ತೆಗೆದುಕೊಳ್ಳಲಾಯಿತು. ಆದರೆ ಇಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ಜಿಲ್ಲೆ ಹಾಕಿರುವ ಕೆಲಸ ಸರಿಯಾಗಿ ನಡೆದಿಲ್ಲವೆಂಬುದು ಅರ್ಥವಾಗುತ್ತದೆ. ನಮ್ಮ ಮಲೆನಾಡಿನ ಭಾಗದಲ್ಲಿಯೂ ಅನೇಕ ಕಡೆಗಳಲ್ಲಿ ರಸ್ತೆಗಳ ರಿಪೇರಿಯಾಗಿಲ್ಲ. ಕೆಲವು ರಸ್ತೆಗಳಿಗೆ ಟಾರು ಹಾಕಲಾಗಿದೆ. ಆದರೆ ಅದರ ರಿಪೇರಿ ಕೆಲಸವಾಗಿಲ್ಲ. ಆದಕಾರಣ ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನೆಂಬುದನ್ನು ನಾನು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ನಾನೂ ಸಹ ಮಲೆನಾಡಿನಿಂದ ಬಂದಿರುವವನು. ನನಗೂ ಸಹ ಇದು ಗೊತ್ತಿದೆ ಇಲ್ಲಿ ಪ್ರಶ್ನೆ ಇರುವುದು ಆರಕಲಗೂಡಿನ ಯಾವುದೋ ರಸ್ತೆಯ ಬಗ್ಗೆ, ಆದರೆ ಮಾನ್ಯ ಸದಸ್ಯರು ಜನರಲ್ ಆಗಿ ಪ್ರಶ್ನೆ ಕೇಳಿದ್ದಾರೆ. ಈ ಬಗ್ಗೆ ಅವರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ನಾನು ಯಾವುದೋ ರಸ್ತೆಯ ಬಗ್ಗೆ ಕೇಳಿಲ್ಲ, ನಮ್ಮ ತಾಲ್ಲೂಕ್ ಬಗ್ಗೆ ಕೇಳಿದ್ದೇನೆ; ನಮ್ಮ ತಾಲ್ಲೂಕ್‌ನಲ್ಲಿ ಇಲ್ಲಿಯವರೆಗೆ ೨೪೫.೭೪ ಕಿ.ಮೀ. ರಸ್ತೆಯನ್ನು ನಿರ್ವಹಣೆ ಹಾಗೂ ಅದನ್ನು ಉತ್ತಮಗೊಳಿಸಲು ಸರ್ಕಾರದವರು ವಹಿಸಿಕೊಂಡ ಮೇಲೆ ರಸ್ತೆಗಳ ರಿಪೇರಿಯಾಗದೆ ಜನರು ಹಾಗೂ ವಾಹನಗಳು ಓಡಾಡಲು ಅನಾನುಕೂಲವಾಗಿದೆ. ಈ ರಸ್ತೆಗಳ ಮೇಲೆ ಒಂದು ಮಂಕರಿ ಮಣ್ಣನ್ನು ಸಹ ಇಲ್ಲಿಯವರೆಗೆ ಹಾಕಿಲ್ಲ. ಇಂತಹ ಸಂದರ್ಭದಲ್ಲಿ ಇವುಗಳ ರಿಪೇರಿ ಮಾಡಿಸಲು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ನಾನು ಮೊದಲೇ ಹೇಳಿದೆ. ಅಲ್ಲಿ ರಸ್ತೆಗಳು ಹಾಳಾಗಿವೆ ಎಂಬುದು ನನಗೂ ಗೊತ್ತಿದೆ. ಆರಕಲಗೂಡು ನಮ್ಮ ಪಕ್ಕದ ತಾಲ್ಲೂಕ್. ಇದಕ್ಕೆ ಯಾವ ರೀತಿ ಹಣ ಒದಗಿಸ ಬೇಕೆಂಬುದನ್ನು ನಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಹಣದ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Fire Accident in Kulibeed Village of North Kanara District

56. SMT. ANASUYA G. SHARMA (Ankola).—Will the Minister for Revenue and Agriculture be pleased to state:—

(a) whether Government is aware that a fire accident took place in Kulibeed village of Sirsi taluk, North Kanara district, some time in middle of May 1979 ;

(b) if so, what was the extent of loss of property and damages caused on account of this fire accident ;

(c) whether Government have paid any compensation towards the loss of property and damages caused ;

(d) if so, the amount paid and the names of persons who have been paid such compensation ?

SRI S. BANGARAPPA (Minister for Revenue and Agriculture).—

(a) Yes. the fire accident accurred on 8th May 1979.

(b) The total extent of loss is estimated at Rs. 1,85,000.

(c) Yes.

(d)—

Name of the Sufferrer	Relief Sanctioned	
	Cash	Building materials
	Rs.	Rs.
Krishna Thimmanna Bhat	600	400
Subray Thimmanna Bhat	600	400
Vishwanath Ganesh Bhat	600	400
Gajanana Ganesh Bhat	600	400
Ganapati Mahabaleshwar Bhat	300	...
Mahabaleshwar Krishna Bhat	300	...
Total	3,000	1,600

ಶ್ರೀಮತಿ ಅನಸೂಯ ಗಜಾನನ ಶರ್ಮ.—ಮಾನ್ಯ ಮಂತ್ರಿಗಳು ಉತ್ತರದಲ್ಲಿ ಬೆಂಕಿ ಆಕಸ್ಮಿಕ ದಿಂದ ೧,೮೫,೦೦೦ ರೂಪಾಯಿ ಹಾನಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಕೊಟ್ಟಿರುವ ಹಣ ನೋಡಿದರೆ ಕೇವಲ ೪,೬೦೦ ರೂಪಾಯಿಗಳು. ಇದೇನೂ ಸಮಂಜಸವಲ್ಲ. ಅಲ್ಲಿ ಬಹಳ ಜನ ಸತ್ತುಹೋಗಿದ್ದಾರೆ, ಬಹಳ ಜನ ಆಸ್ತಿಪಾಸ್ತಿ ಕಳೆದುಕೊಂಡಿದ್ದಾರೆ. ಆದುದರಿಂದ ಹೆಚ್ಚಿಗೆ ಪರಿಹಾರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಕಿ ಅನಾಹುತ ಆದ ಕೂಡಲೇ ತಾತ್ಕಾಲಿಕ ಪರಿಹಾರ ಧನ ಮೊದಲು ಕೊಟ್ಟಿದ್ದೇವೆ, ನಂತರ ನಷ್ಟ ಎಷ್ಟೆಷ್ಟು ಆಗಿದೆ ಎನ್ನುವುದನ್ನು ವಿಚಾರಮಾಡಿ ನಗದು ಹಣ ಕೊಟ್ಟಿದ್ದೇವೆ, ಸಾಮಗ್ರಿಗಳ ಬೆಲೆ ಅಂದಾಜು ಮಾಡಿ ಕೂಡತಕ್ಕಂಥ ಏರ್ಪಾಟು ಮಾಡಿದ್ದೇವೆ. ಒಂದು ವೇಳೆ ಪರಿಹಾರ ಧನ ಕೊಟ್ಟಿರುವುದು ಬಹಳ ಕಡಿಮೆ ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದ್ದರೆ ಅದನ್ನು ಪುನಃ ಪರಿಶೀಲನೆ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀಮತಿ ಅನಸೂಯ ಗಜಾನನ ಶರ್ಮ —ಪರಿಹಾರ ಧನ ಕೊಟ್ಟಿರುವುದು ಬಹಳ ಕಡಿಮೆ ಆದ್ದರಿಂದ ಇನ್ನೂ ಹೆಚ್ಚಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ —ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಯು.ಬಿ. ಬೋರ್ಕರ್.—ಈ ಏರಿಯಾನಲ್ಲಿ ಆಕಸ್ಮಿಕವಾಗಿ ಬೆಂಕಿ ಅನಾಹುತ ವಡೆಯಿಪ್ಪು ಪರಿಹಾರ ಸಿಕ್ಕುವುದು ತಡವಾದುದರಿಂದ ಕೆಲವೊಂದು ಹೌಸ್ ಹೋಲ್ಡರ್ಸ್, ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳಲು ಕಾಡಿನಿಂದ ಮರಗಳನ್ನು ತರುತ್ತಿದ್ದ ಸಮಯದಲ್ಲಿ ಅರಣ್ಯ ಇಲಾಖೆಯವರು ಅಡ್ಡಿ

ಸಾವಿರಾರು ರೂಪಾಯಿಗಳ ದಂಡ ಹಾಕಿ ವಸೂಲಿ ಕ್ರಮ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಆಸ್ತಿಪಾಸ್ತಿ ಕಳೆದುಕೊಂಡು ನೊಂದ ಜನರಿಗೆ ಮನೆ ಕಟ್ಟಿಕೊಳ್ಳಲು ಪುಕ್ಕಟೆ ಮರ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ.—ಬೆಂಕಿ ಅನಾಹುತದಿಂದ ನೊಂದಿರತಕ್ಕ ಜನ ಮನೆ ಕಟ್ಟಿಕೊಳ್ಳುವ ಉದ್ದೇಶಕ್ಕಾಗಿ ಕಾಡಿನಿಂದ ಮರಸನ್ನು ತರಬೇಕು ಎಂದೇನೂ ಕಾನೂನಿಲ್ಲ. ಯಾವ ರೀತಿ ತೆಗೆದುಕೊಳ್ಳಬೇಕು ಎಂದು ಕಾನೂನನ್ನು ನಿಗದಿ ಮಾಡಿದ್ದೇವೆ. ಈ ಹಣವನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಜಮಾ ಮಾಡತಕ್ಕಂಥದ್ದು ಇದೆ. ಮಾನ್ಯ ಸದಸ್ಯರು ಹೇಳುವ ರೀತಿ ಅವರು ಮರವನ್ನು ತರತಕ್ಕ ಸಂದರ್ಭದಲ್ಲಿ ಹಿಡಿದು-ಸಾವಿರಾರು ರೂಪಾಯಿಗಳ ದಂಡವನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇದರ ಜೊತೆಗೆ ಈ ರೀತಿ ತರತಕ್ಕಂಥಾದ್ದು ಕಾನೂನು ಪ್ರಕಾರ ತಪ್ಪು ಇವರು ಮನೆ ಕಟ್ಟಿಕೊಳ್ಳುವುದಕ್ಕೆ ತರಬಹುದು, ಬೇರೆಯವರು ಈ ರೀತಿ ತೆಗೆದುಕೊಂಡು ಹೋಗಿ ದುರುಪಯೋಗ ಮಾಡಿಕೊಳ್ಳಬಹುದು. ಇದರ ಬಗ್ಗೆ ತಾವು ಬರೆದು ಕಳಿಸಿಕೊಡಿ, ಅದನ್ನು ವಿಚಾರ ಮಾಡಿ ನೋಡುತ್ತೇನೆ.

Loan Advance from Tumkur District Village Industries Bank to Kunigal Taluk Industrialists

71. SRI D.T. MAYANNA (Huliyurdurga).—Will the Minister for Finance and Co-operation be pleased to state :—

(a) the amount of loan granted by the Tumkur District Rural Industrial Bank to the Industrialists of the Kunigal Taluk since 1976 to 1979, and the Yearwise rate of interest, the names of the industrialists and their addresses ;

(b) the date on which the industrialists got sanction of loan when the industries were started after obtaining the Electricity and started the industries, the names and places of residences of each of the industrialists :

(c) the reasons for delay if any for starting the industries after obtaining the loans from the Bank ?

SRI M. VEERAPPA MOILY (Minister for Finance and Co-operation).

(a) A sum of Rs. 2,02,000 has been sanctioned to the industrialists of the Kunigal taluk in the form of loan from 1976 to 1979 from the Tumkur District Industrial Bank. The rate of interest varies from Rs. 7 to 13½%. The statement showing their names and places of residence is laid on the Table of the House.

(b)—

Date of sanction of loan	Date of obtaining the Electricity	Date of starting the industries
(1) 4-1-1977	29-5-1975	29-5-1975
(2) 23-2-1976	17-1-1975	26-11-1976
(3) 3-1-1976	29-5-1975	29-5-1975
(4) 9-7-1976	20-12-1977	20-12-1977